**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು**

ಓಎಸ್ 307/2020 ಪಿಡಬ್ಲ್ಯೂ-1

ದಿನಾಂಕಃ-19-08-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಃ-ಪ್ರತಿವಾದಿಯ ಪರ ಶ್ರೀ.ಎಂಕೆಜೆ ವಕೀಲರಿಂದಃ-**

ನಾನು ದ್ವಿತೀಯ ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೆನೆ. ನಾನು ಬೆಂಗಳೂರಿನಲ್ಲಿ ಸುಮಾರು 6 ವರ್ಷಗಳಿಂದ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆನೆ. 1 ನೇ ಪ್ರತಿವಾದಿಯು ಹಾಗಲಹಳ್ಳಿಯವರಾಗಿರುತ್ತಾರೆ. ಅಂದಾಜು ನಮ್ಮ ಗ್ರಾಮಕ್ಕೂ ಅವರ ಗ್ರಾಮಕ್ಕೂ 7-8 ಕೀಮಿ ಎಂದು ಹೇಳಬಹುದು. ಕ್ರಯದ ಕರಾರು ಆದ ಸಮಯದಲ್ಲಿ ಚನ್ನಪಟ್ಟಣ ತಾಃ ಮಾಚನಹಳ್ಳಿಯಲ್ಲಿ ವಾಸವಾಗಿದ್ದೆನು. ನನ್ನ ಗಂಡ ಬೆಂಗಳೂರಿನ ಜ್ಯೂಸ್ ಅಂಗಡಿಯಲ್ಲಿ 25 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ನಾನು 2011 ರಲ್ಲಿ ಶಿವಣ್ಣ ರವರನ್ನು ಮದುವೆಯಾಗಿರುತ್ತೆನೆ. ನಾನು ವಿವಾಹವಾದಾಗಿನಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನನ್ನ ಗಂಡ ಅಲ್ಪ ಸ್ವಲ್ಪ ಹಣಕಾಸಿನ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ನನ್ನ ಹೆಸರಿನಲ್ಲಿ ಯಾವುದೇ ಚರ-ಸ್ಥಿರ ಆಸ್ತಿಗಳು ಇರುವುದಿಲ್ಲ. ಕ್ರಯದ ಕರಾರಿನಲ್ಲಿ ತೋರಿಸಿರುವ ಹಣವನ್ನು ನನ್ನ ಗಂಡ ಕೊಟ್ಟಿರುತ್ತಾರೆ. ನನ್ನ ಗಂಡ ಸದರಿ ಹಣವನ್ನು ನನ್ನ ತಂದೆಯಿಂದ ಸ್ವಲ್ಪ, ಅವರು ಕೆಲಸ ಮಾಡುವ ಅಂಗಡಿಯ ಮಾಲೀಕರಿಂದ ಸ್ವಲ್ಪ, ಉಳಿತಾಯ ಮಾಡಿದ ಸ್ವಲ್ಪ ಹಣವನ್ನು ಸೇರಿಸಿ ಕೊಟ್ಟಿರುತ್ತಾರೆ. ಆ ಬಗ್ಗೆ ದಾಖಲೆಯಿರುವುದಿಲ್ಲ. ಕ್ರಯದ ಕರಾರು ಮಾಡಿಕೊಳ್ಳುವ ಮುಂಚೆ ನನ್ನ ಗಂಡನ ಮತ್ತು 1 ನೇ ಪ್ರತಿವಾದಿಯ ನಡುವೆ ಮಾತುಕತೆಯಾಗಿತ್ತು. ಯಾವ ದಿನ ಮಾತುಕತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಮಾತುಕತೆಯಲ್ಲಿ ನಾನು ಭಾಗವಹಿಸಿಲ್ಲ. ಸದರಿ ಮಾತುಕತೆಗೆ ಸುರೇಶ, ಮುತ್ತಲಿಂಗಯ್ಯ ರವರು ಸೇರಿದ್ದರು. ಎಲ್ಲಿ ಮಾತುಕತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ.

ಕ್ರಯದ ಕರಾರು ಮಾಡಿಕೊಳ್ಳುವ ಮೊದಲು ದಾವಾ ಆಸ್ತಿಯ ದಾಖಲೆಯನ್ನು ನಾನು ನೋಡಿರುತ್ತೇನೆ. 1 ನೇ ಪ್ರತಿವಾದಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ರಾಜೇಗೌಡನದೊಡ್ಡಿಯಲ್ಲಿ ಇರುತ್ತದೆ. ಕ್ರಯದ ಕರಾರು ಆಗುವ ಮೊದಲು ನಾನು ದಾವಾ ಆಸ್ತಿಯನ್ನು ನೋಡಿರುವುದಿಲ್ಲ. ನನ್ನ ಗಂಡ ದಾವಾ ಆಸ್ತಿಯ ಅಕ್ಕ-ಪಕ್ಕದವರನ್ನು ಬೇಟಿ ಮಾಡಿ ಅದರ ಬಗ್ಗೆ ತಿಳಿದುಕೊಂಡಿರುತ್ತಾರೆ, ನಾನು ವಿಚಾರಿಸಿಲ್ಲ. 3 ಮತ್ತು 4 ನೇ ಪ್ರತಿವಾದಿಗಳು ಅಪ್ರಾಪ್ತರಾದ ಕಾರಣದಿಂದ ಅವರುಗಳ ಸಹಿಗಳನ್ನು ಕ್ರಯದ ಕರಾರು ಪತ್ರಕ್ಕೆ ಪಡೆದಿರುವುದಿಲ್ಲ. 3 ಮತ್ತು 4 ನೇ ಪ್ರತಿವಾದಿಗಳು ಕ್ರಯದ ಕರಾರು ಆಗುವ ಸಮಯದಲ್ಲಿ

ಏನು ವಿದ್ಯಾಭ್ಯಾಸ ಮಾಡುತ್ತಿದ್ದರೆಂದು ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರವನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾಡಲಾಗಿತ್ತು ಎಂದು ಬರೆದಿಲ್ಲ ಎಂದು ನುಡಿಯುತ್ತಾರೆ. ಕ್ರಯದ ಕರಾರು ಪತ್ರದಲ್ಲಿ ಯಾವ ಕಾರಣಕ್ಕಾಗಿ ಆಸ್ತಿಯನ್ನು ಮಾರಾಟ ಮಾಡುತ್ತಿದ್ದಾರೆಂದು ಬರೆದಿರುವ ಬಗ್ಗೆ ನನಗೆ ತಿಳಿದಿಲ್ಲ

ದಾವಾ ಆಸ್ತಿ ಬಿಟ್ಟು ಬೇರೆ ಆಸ್ತಿ ಪ್ರತಿವಾದಿಗಳಿಗೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ.ನನ್ನ ಗ್ರಾಮ, ಕೆ ಹೊನ್ನಲಗೆರೆ, ರಾಜೇಗೌಡನದೊಡ್ಡಿ ಹತ್ತಿರದಲ್ಲಿದೆ ಎಂದರೆ ಸರಿ. ಈ ಗ್ರಾಮಗಳ ನಡುವೆ ಮದ್ದೂರು- ಹಲಗೂರು ಮುಖ್ಯರಸ್ತೆ ಹೋಗಿದೆ ಎಂದರೆ ಸರಿ. ಕೆ ಹೊನ್ನಲಗೆರೆ ಗ್ರಾಮ ಸಾಕಷ್ಟು ಅಭಿವೃದ್ಧಿ ಆಗಿದೆ ಎಂದರೆ ಸರಿ. ಕೆ ಹೊನ್ನಲಗೆರೆಯಿಂದ ಅರ್ಧ ಕೀಮೀ ದೂರದಲ್ಲಿ ರಾಜೇಗೌಡನದೊಡ್ಡಿ ಇದೆ ಎಂದರೆ ಸರಿ. ಆ ಜಾಗಗಳಲ್ಲಿ ಆಸ್ತಿಗಳ ಬೆಲೆ ಹೆಚ್ಚಿದೆ ಎಂದರೆ ಸರಿ. ನಾನು ಕ್ರಯದ ಕರಾರು ಪತ್ರ ಮಾಡಿಕೊಂಡಾಗ ದಾವಾ ಆಸ್ತಿಯ ಮಾರುಕಟ್ಟೆಯ ಮೌಲ್ಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಉದ್ದೇಶ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ 3 ಲಕ್ಷ ಹಣ 2017 ರಲ್ಲಿ ಸಾಲವಾಗಿ ಬೇಕಾಗಿತ್ತು, ಆಗ ನಾನು ಮತ್ತು ನನ್ನ ಗಂಡ ದಾವಾ ಆಸ್ತಿಯನ್ನು ಕ್ರಯದ ಕರಾರು ಪತ್ರವನ್ನು ಭದ್ರತೆಗಾಗಿ ಮಾಡಿಕೊಟ್ಟರೆ ಹಣವನ್ನು ಸಾಲವಾಗಿ ನೀಡುವುದಾಗಿ ತಿಳಿಸಿದ್ದೇವು ಎಂದರೆ ಸರಿಯಲ್ಲ. 3 ಲಕ್ಷ ಹಣ ನೀಡಿ 4 ಲಕ್ಷಕ್ಕೆ ಕ್ರಯದ ಕರಾರು ಪತ್ರವನ್ನು ಬರೆದುಕೊಡಬೇಕೆಂದು ನಿಂಬದನೆ ಹಾಕಿದ್ದೇವು ಎಂದರೆ ಸರಿಯಲ್ಲ. 3 ಲಕ್ಷ ಹಣವನ್ನು ಪಡೆದಿದ್ದರೂ ಸಹ ಪ್ರತಿವಾದಿಗಳು 4 ಲಕ್ಷ ಹಣಕ್ಕೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ಬ್ಯಾಂಕ್ ಖಾತೆಯ ಮೂಲಕ 3 ಲಕ್ಷ ಹಣವನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. 3 ಲಕ್ಷ ಹಣವನ್ನು ಬ್ಯಾಂಕ್ ಖಾತೆಯ ಮೂಲಕ ಮತ್ತು 1 ಲಕ್ಷ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇವೆ. 1 ಲಕ್ಷ ರೂ ಹಣವನ್ನು ನಗದು ರೂಪದಲ್ಲಿ ನೀಡಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸದರಿ 3 ಲಕ್ಷ ಹಣಕ್ಕೆ ಮಾಸಿಕ ಶೇಕಡ 1 ರಂತೆ ಬಡ್ಡಿಯನ್ನು ಕೊಡುತ್ತಿದ್ದರು ಎಂದರೆ ಸರಿಯಲ್ಲ. ನಂತರದಲ್ಲಿ ಅವರು ಸರಿಯಾಗಿ ಬಡ್ಡಿ ಕಟ್ಟದ ಕಾರಣ ಈ ದಾವೆ ಹೂಡಿರುತ್ತೇವೆಂದರೆ ಸರಿಯಲ್ಲ. ದಾವಾ ಆಸ್ತಿಯ ಬೆಲೆ ಪ್ರಸ್ತುತ 35 ಲಕ್ಷಕ್ಕಿಂತ ಹೆಚ್ಚಿದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರದಲ್ಲಿ ಏನು ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ. ಪ್ರಮಾಣ ಪತ್ರವನ್ನು ನಾನು ಓದಿರುವುದಿಲ್ಲ. ಪ್ರತಿವಾದಿಗಳು ಅಸಲು ಹಣ ಮತ್ತು ಬಡ್ಡಿಯನ್ನು ನೋಟೀಸ್ ತಲುಪಿದ

ನಂತರ ಮೌಖಿಕಾಗಿ ವಾಪಸ್ ಮಾಡುವುದಾಗಿ ತಿಳಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಡ್ಡಿಗಾಗಿ ನಾವು ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ದಾವಾ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸುರೇಶ ಎಂಬ ಸಾಕ್ಷಿದಾರರು ನಮ್ಮ ಊರಿನವರು, ಮುತ್ತಲಿಂಗಯ್ಯ ರವರು ರಾಜೇಗೌಡನದೊಡ್ಡಿಯವರಾಗಿರುತ್ತಾರೆ. ಸುರೇಶ ರವರು ನನಗೆ ಮತ್ತು ನನ್ನ ಗಂಡನಿಗೆ ಗೊತ್ತಿರುತ್ತಾರೆ. ಸುರೇಶ ರವರು ಕ್ರಯದ ಕರಾರಿನ ಮಾತುಕತೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ಸಾಕ್ಷಿಯ ಸಹಿಃ

ನ್ಯಾಯಾಧೀಶರು, ಮದ್ದೂರು.